ದ್ದಾರೆ. ಯಾರು ಯಾರು ಎಷ್ಟೆಷ್ಟು ಹಂಚಿಕೊಳ್ಳಬೇಕು ಎಂಬ ಬಗ್ಗೆ ವ್ಯವಸ್ಥೆ ಆಗಿ ಈಗಾಗಲೇ ಹಂಚಿಕೆ ಆಗುತ್ತಿದೆ. ಇದರ ಬಗ್ಗೆ ಪ್ರಸ್ತಾಪಿಸಲಿಕ್ಕಾಗಿ ಇಷ್ಟೊಂದು ದಾಖಲೆಗಳನ್ನು ಇಟ್ಟುಕೊಂಡು ಅಧಿಕಾರಿಗಳಿಗೆ ಹೇಳಿದರೂ ಸಹ ಅವರು ಕೇಳಲಿಲ್ಲ. ನಾಳೆ ಅಸೆಂಬ್ಲಿ ಮುಗಿಯುತ್ತದೆ. ಆಷ್ಟರಲ್ಲಿ ಅವರು ಹಂಚಿಕೊಂಡು ಮನೆಗೆ ಹೋಗುತ್ತಾರೆ. ನಾವೂ ಊರ ಕಡೆ ಹೋಗುತ್ತೇವೆ. ಇದು ೫೦ ಕೋಟಿ ರೂಪಾಯಿಗಳ ವ್ಯವಹಾರ.

ಅಧ್ಯಕ್ಷರು.— ಆ ದಾಖಲೆಗಳನ್ನು ದಯವಿಟ್ಟು ನನ್ನ ಕಡೆ ಕಳುಹಿಸಿಕೊಡಿ.

ಶ್ರೀ ಬಿ. ಸ್ವಾಮಿರಾವ್. — ಕಳುಹಿಸಿಕೊಡುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.— ಈ ಬಗ್ಗೆ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವಾಗ ಮಾತನಾಡೋಣ ಎಂದು ಇದ್ದೆ. ಇದು ನನ್ನ ಗಮನಕ್ಕೂ ಬಂದಿದೆ. ಎಕ್ಸ್‌ಪ್ಲಾನೇಷನ್ ಆಫ್ ಟೆಕ್ನಿಕಲ್ ಎಜುಕೇಷನ್ ಎಂದು ಹೇಳಿ ಮಾತನಾಡಿದ್ದಾರೆ. ಇದು ಯಾವ ರೀತಿ ಆಗುತ್ತಿದೆ ಎಂದು ಹೇಳಿದ್ದಾರೆ. ಆ ದಾಖಲೆಗಳೂ ನನ್ನ ಕಡೆ ಪೂರ್ತಿ ಬಂದಿದೆ ಒಂದು ಹೆಚ್‌ಪಿ ಮೋಟಾರ್‌ಗೆ ೩೨ ಸಾವಿರ ಚಾರ್ಜ್ ಮಾಡಿದ್ದಾರೆ. ಮತ್ತೆ...

ಅಧ್ಯಕ್ಷರು.— ನಾಳೆ ಇದನ್ನು ತೆಗೆದುಕೊಳ್ಳೋಣ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.— ಇನ್ನೊಂದು ವಿಚಾರವೆಂದರೆ ಯಾರು ಪ್ರಾಮಾಣಿಕವಾಗಿ ಇದನ್ನೆಲ್ಲ ಪತ್ತೆ ಮಾಡಿದ್ದಾರೋ, ಅವರನ್ನು ಸಸ್ಪೆಂಡ್ ಮಾಡಿದ್ದಾರೆ. ಇದರ ಬಗ್ಗೆ ತಾವು...

ಅಧ್ಯಕ್ಷರು.— ನಾಳೆ ಕಾಲಿಂಗ್ ಅಟೆನ್‌ಷನ್ನಾಗಿ ಇದನ್ನು ತೆಗೆದುಕೊಳ್ಳುವೆ.

ಶ್ರೀ ವಾಟಾಳ್‌ನಾಗರಾಜ್.— ನಿನ್ನೆ ವಿದ್ಯುತ್ ಸಚಿವರು ಎಷ್ಟು ಪ್ರಮಾಣದಲ್ಲಿ ವಿದ್ಯುತ್ತನ್ನು ಪಂಪ್‌ಸೆಟ್ಟುಗಳಿಗೆ ಹೆಚ್ಚು ಮಾಡುತ್ತೇವೆಂಬ ಬಗ್ಗೆ ಹೇಳಿಕೆ ನೀಡುವುದಾಗಿ ಹೇಳಿದ್ದರು. ಈಗ ಮಾನ್ಯ ಸಚಿವರಿದ್ದಾರೆ. ಚಾಮರಾಜನಗರಕ್ಕೆ ಸಂಬಂಧಪಟ್ಟಂತೆ ಅವರು ಈ ಸಭೆಗೆ ಮಾಹಿತಿ ಒಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

PAPERS LAID ON THE TABLE

SRI B. BASAVALINGAPPA (Minister for Rural Development and Panchayat Raj).— Mr. Speaker Sir, On behalf of the Minister for Finance, I beg to lay.

Report of the Comptroller and Auditor General of India for the year ended 31st March, 1988 of the Government of Karnataka (No. 4) (Commercial)

as required under Article 151 (2) of Constitution of India.

MR. SPEAKER.— Papers laid.

ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ ಪ್ರಸ್ತಾಪ

ಆಟೋರಿಕ್ಷಾದವರ ಮುಷ್ಕರದ ಬಗ್ಗೆ

† ಶ್ರೀ ಪಿ. ಜಿ ಆರ್. ಸಿಂಧ್ಯಾ.— ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಬೆಂಗಳೂರು ನಗರದಲ್ಲಿ ನಿನ್ನೆಯಿಂದ ಸುಮಾರು ಮೂವತ್ತೈದು ಸಾವಿರಕ್ಕೂ ಹೆಚ್ಚು ಜನ ಆಟೋರಿಕ್ಷಾ ಮಾಲೀಕರು ಮತ್ತು ಆಟೋರಿಕ್ಷಾ ಚಾಲಕರು ಮುಷ್ಕರವನ್ನು ಮಾಡಿರುವುದರಿಂದಾಗಿ ಸುಮಾರು ಎರಡು-ಎರಡೂವರೆ ಲಕ್ಷ ಸಾಮಾನ್ಯ ವರ್ಗದ ಜನರಿಗೆ ಪ್ರಯಾಣ ಮಾಡತಕ್ಕಂಥವರಿಗೆ ಬಹಳ ತೊಂದರೆಯಾಗಿದೆ. ಇದರ ಕಡೆಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ಎಂದು ನಮಗೆ ನಿರ್ದಿಷ್ಟವಾಗಿ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ನೋಡಿದರೆ

†ಈ ಚಿಹ್ನೆ ಸಂಬಂಧಪಟ್ಟ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.